# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570 005

**ವಿಷಯ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧಕರನ್ನು ಪಿಹೆಚ್.ಡಿ. ಸಂಶೋಧನಾ ಶಿಷ್ಯವೇತನಕ್ಕೆ ಆಯ್ಕೆ ಮಾಡಿರುವ ಬಗ್ಗೆ:**

**ಉಲ್ಲೇಖ:**
1. ವಿ.ವಿ. ಪ್ರಕಟಣೆ ಸಂಖ್ಯೆ: ವಿಫ8/02/2021-22 ದಿನಾಂಕ: 26-10-2023
2. ದಿನಾಂಕ: 03.02.2023 ಮತ್ತು 25.01.2024 ರಂದು ನಡೆದ ಸಿಂಡಿಕೇಟ್ ಸಭೆಯ ತೀರ್ಮಾನ.
3. ದಿನಾಂಕ: 04.05.2024 ರಂದು ಶಿಷ್ಯವೇತನವನ್ನು ನೀಡುವ ಸಂಬಂಧ ನಡೆದ ಸಭೆಯ ತೀರ್ಮಾನ.
4. ಮಾನ್ಯ ಕುಲಪತಿಗಳ ಅನುಮೋದನೆಯ ದಿನಾಂಕ 13-05-2024.

*****

**ಪ್ರಸ್ತಾವನೆ:**

2021-22ನೇ ಸಾಲಿಗಾಗಿ 20 ಸಂಶೋಧನಾ ವಿದ್ಯಾರ್ಥಿಗಳನ್ನು ಆಯ್ಕೆಮಾಡಲು ವಿಶ್ವವಿದ್ಯಾನಿಲಯದ ಸಂಶೋಧನಾ ಶಿಷ್ಯವೇತನಕ್ಕೆ ದಿನಾಂಕ 17-08-2021ರಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಆದರೆ ಈ ಸಾಲಿನಲ್ಲಿ ಅರ್ಜಿ ಸಲ್ಲಿಸಿದ್ದ ಒಟ್ಟು 173 ವಿದ್ಯಾರ್ಥಿಗಳನ್ನು ದಿನಾಂಕ 7-12-2021 ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಚರ್ಚಿಸಿದಂತೆ ಕಡತ ಸಂಖ್ಯೆ ಎಸ್‌ಪಿಸಿ8/02/2021-22ರ ಪುಟ ಸಂಖ್ಯೆ 15, 20, 22, 25, 28 31, 33, 34, 39 & 45ರಲ್ಲಿ ಆಯ್ಕೆಮಾಡಲು ಮಾನ್ಯ ಕುಲಪತಿಗಳು ಆದೇಶಿಸಿರುತ್ತಾರೆ. ಅದರಂತೆ ವಿವಿಧ ದಿನಾಂಕಗಳಂದು ವಿಶ್ವವಿದ್ಯಾನಿಲಯದ ಶಿಷ್ಯವೇತನಕ್ಕಾಗಿ ಆಯ್ಕೆಮಾಡಿ ಆದೇಶ ಹೊರಡಿಸಲಾಗಿದೆ. ತದನಂತರ ದಿನಾಂಕ 03-02-2023ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ "ಪ್ರಸಕ್ತ ಕ್ಯಾಲೆಂಡರ್ ವರ್ಷದಿಂದ (ಜನವರಿಯಿಂದ ಡಿಸೆಂಬರ್‌ವರೆಗೆ) ಶಿಷ್ಯವೇತನಕ್ಕಾಗಿ ಅರ್ಜಿ ಸಲ್ಲಿಸುವ ಅರ್ಹ ಅಭ್ಯರ್ಥಿಗಳ ಪೈಕಿ 20 ಅಭ್ಯರ್ಥಿಗಳಿಗೆ ಮಾತ್ರ ಮೆರಿಟ್ ಆಧಾರದ ಮೇಲೆ ವಿಶ್ವವಿದ್ಯಾನಿಲಯದ ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡ ಶಿಷ್ಯವೇತನಕ್ಕಾಗಿ ಆಯ್ಕೆಮಾಡಲು" ತೀರ್ಮಾನಿಸಲಾಗಿದೆ. ಅದರಂತೆ ವಿಶ್ವವಿದ್ಯಾನಿಲಯದ ಸಂಶೋಧನಾ ಶಿಷ್ಯವೇತನಕ್ಕೆ 20 ಸಂಶೋಧನಾ ವಿದ್ಯಾರ್ಥಿಗಳನ್ನು ಆಯ್ಕೆಮಾಡಲು ದಿನಾಂಕ 26-10-23ರಂದು ಪ್ರಕಟಣೆ ನೀಡಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಕ್ರಮವಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿದ 23 (ಇಬ್ಬರು NFST ಶಿಷ್ಯವೇತನಕ್ಕೆ ಆಯ್ಕೆಯಾಗಿರುತ್ತಾರೆ), ಹೊರ ವಿಶ್ವವಿದ್ಯಾನಿಲಯದ 10 ವಿದ್ಯಾರ್ಥಿಗಳು ಮತ್ತು ಅಂತಿಮ ದಿನಾಂಕದ ನಂತರ ಸಲ್ಲಿಸಿದ 06 ಸಂಶೋಧನಾ ವಿದ್ಯಾರ್ಥಿಗಳ ಅರ್ಜಿಗಳನ್ನೊಲಗೊಂಡಂತೆ ಒಟ್ಟು 39 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ದಿನಾಂಕ 25-01-2024ರಂದು ನಡೆದ ಸಿಂಡಿಕೇಟ್ "ಸುದೀರ್ಘ ಚರ್ಚೆಯ ನಂತರ 2022-23ನೇ ಸಾಲಿನ 20 ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರಸ್ತುತ ವರ್ಷದಲ್ಲಿ ಶಿಷ್ಯವೇತನವನ್ನು ನೀಡುವುದು. 2023-24ನೇ ಸಾಲಿನ 20 ಸಂಶೋಧನಾ ವಿದ್ಯಾರ್ಥಿಗಳಿಗೆ ಏಪ್ರಿಲ್ 2024ರ ನಂತರ ಶಿಷ್ಯವೇತನವನ್ನು ವಿಶ್ವವಿದ್ಯಾನಿಲಯದ ಮಾರ್ಗಸೂಚಿಯನುಸಾರ ನೀಡಲು ತೀರ್ಮಾನಿಸಿತು ಹಾಗೂ ಹೊರ ವಿಶ್ವವಿದ್ಯಾನಿಲಯ ಮತ್ತು ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಸ್ನಾತಕೋತ್ತರ ಪದವಿ ಪಡೆದು ನಮ್ಮ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ನಡೆಸುವ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನೀಡುವ ಸಂಬಂಧ ಒಂದು ಸಮಿತಿಯನ್ನು ರಚಿಸಿ, ಸಮಿತಿಯ ವರದಿಯನ್ವಯ ಕ್ರಮಕೈಗೊಳ್ಳಲು" ತೀರ್ಮಾನಿಸಿತು. ನೂತನವಾಗಿ ಅರ್ಜಿ ಸಲ್ಲಿಸಿರುವ ಸಂಶೋಧನ ವಿದ್ಯಾರ್ಥಿಗಳು ನೋಂದಣಿಯಾಗಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಬೇಕೆಂದು ಒತ್ತಾಯಿಸಿ ದಿನಾಂಕ 23-01-2024 & 1-2-2024ರಂದು ಮನವಿ ಪತ್ರಗಳನ್ನು ಸಲ್ಲಿಸಿರುತ್ತಾರೆ. ಸಿಂಡಿಕೇಟ್ ತೀರ್ಮಾನಿಸಿದಂತೆ ಹೊರ ವಿಶ್ವವಿದ್ಯಾನಿಲಯದ ಸಂಶೋಧಕರು ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ ಪರಿಗಣಿಸುವುದರ ಬಗ್ಗೆ ಪ್ರೊ. ಡಿ.ಆನಂದ್‌ರವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯು ದಿನಾಂಕ 04-05-2024ರಂದು ಸಭೆ ಸೇರಿ "ಶಿಷ್ಯವೇತನವನ್ನು ಪೂರ್ತಿಯಾಗಿ ಮೈಸೂರು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಭರಿಸುತ್ತಿರುವುದರಿಂದ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವೀಧರರನ್ನು ಮಾತ್ರ ಶಿಷ್ಯವೇತನಕ್ಕೆ ಆಯ್ಕೆ ಮಾಡಲು ಸಭೆ

ತೀರ್ಮಾನಿಸಿತು ಹಾಗೂ ಮಾನಸಗಂಗೋತ್ರಿಯ ಅಧ್ಯಯನ ವಿಭಾಗಗಳಲ್ಲಿ ಪಿಹೆಚ್.ಡಿ. ಸ್ನಾತಕೋತ್ತರ ಪದವಿಗೆ ನೊಂದಣಿಯಾಗಿರುವವರನ್ನು ಮಾತ್ರ ಆಯ್ಕೆ ಮಾಡಲು ನಿರ್ಧಾರ ಮಾಡಲಾಯಿತು". "ಇನ್ನು ಮುಂದೆ ಯಾವುದೇ ರೀತಿಯ ಹೊರ ವಿಶ್ವವಿದ್ಯಾನಿಲಯದ ಸಂಶೋಧಕರು ಮತ್ತು ಅಧಿಸೂಚನೆ ಹೊರಡಿಸಿದ ನಂತರ ಬರುವಂತಹ ಅರ್ಜಿಗಳನ್ನು ಪರಿಗಣಿಸಬಾರದೆಂದು ಸಭೆಯು ತೀರ್ಮಾನಿಸಿತು". ಮಾನ್ಯ ಕುಲಪತಿಗಳು 2023-24 & 2024-25ನೇ ಸಾಲಿಗೆ ಅನ್ವಯವಾಗುವಂತೆ ಪ್ರಸ್ತುತ ಅರ್ಜಿ ಸಲ್ಲಿಸಿರುವ ಎಲ್ಲಾ ಸಂಶೋಧಕರುಗಳಿಗೆ ದಿನಾಂಕ 01-04-2024ರಿಂದ ಪೂರ್ವಾನ್ವಯವಾಗುವಂತೆ ವಿಶ್ವವಿದ್ಯಾನಿಲಯದ ಶಿಷ್ಯವೇತನವನ್ನು ನೀಡಲು ಆದೇಶಿಸಿರುತ್ತಾರೆ. ಅದರಂತೆ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ: ವಿಘ8/02/2021-22 ದಿನಾಂಕ: 13ನೇ ಮೇ, 2024**/63

ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಮತ್ತು ಪ್ರಸ್ತಾವನೆಯಲ್ಲಿನ ಅಂಶಗಳಿಗೆ ಅನುಗುಣವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ವತಿಯಿಂದ ನೀಡಲಾಗುವ ವಿಶ್ವವಿದ್ಯಾನಿಲಯದ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಈ ಕೆಳಕಂಡ ಸಂಶೋಧಕರನ್ನು ಈ ಕೆಳಗಿನ ಷರತ್ತುಗಳಿಗೊಳಪಟ್ಟು ಆಯ್ಕೆಮಾಡಲಾಗಿದೆ.

| ಕ್ರಸಂ. | ವಿದ್ಯಾರ್ಥಿ ಹೆಸರು ಮತ್ತು ವಿಳಾಸ | ಜಾತಿ | ವಿಭಾಗ | ಮಾರ್ಗದರ್ಶಕರ ಹೆಸರು ಮತ್ತು ವಿಳಾಸ | ಸಂಶೋಧನಾ ಶೀರ್ಷಿಕೆಯ ವಿಷಯ |
|---|---|---|---|---|---|
| 01 | **ಸುಭಾಷ್ ಎಂ.**<br>ಬಿನ್ ಮರಿಸ್ವಾಮಿ<br># 143 ಹೊಸ ಬೀದಿ<br>ಮಂಗಲ (ಗ್ರಾಮ & ಪೋ)<br>ಹನೂರು (ತಾ) ಚಾಮರಾಜನಗರ ಜಿಲ್ಲೆ | SC | ಸಹಕಾರ ವಿಭಾಗ ಮಹಾರಾಜ ಕಾಲೇಜು ಮೈಸೂರು | ಡಾ. ಬಿ.ಎಸ್. ಚಂದ್ರಶೇಖರ<br>ಪ್ರಾಧ್ಯಾಪಕರು, ಸಹಕಾರ ವಿಭಾಗ ಮಹಾರಾಜ ಕಾಲೇಜು ಮೈಸೂರು | A Study of Taluk Agriculture Producers Marketing Co-operation Societies In Karnataka |
| 02 | **ಚೇತನ್**<br>ಬಿನ್ ಸ್ವಾಮಯ್ಯ<br>ಹಬ್ಬನಕುಪ್ಪೆ (ಗ್ರಾಮ), ಚಿಲ್ಕುಂದ (ಪೋ), ಹುಣಸೂರು (ತಾ)<br>ಮೈಸೂರು ಜಿಲ್ಲೆ | SC | ಸಹಕಾರ ವಿಭಾಗ ಮಹಾರಾಜ ಕಾಲೇಜು ಮೈಸೂರು | ಪ್ರೊ. ಆರ್. ಸಿದ್ದರಾಜು<br>ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು<br>ಅರ್ಥಶಾಸ್ತ್ರ, ಸಹಕಾರ ಮತ್ತು ಗಾಂಧಿ ಅಧ್ಯಯನ ವಿಭಾಗ, ಮಹಾರಾಜ ಕಾಲೇಜು ಮೈಸೂರು | An Economic Analysis of DCCBs In Karnataka-A Comparative Study |
| 03 | **ಅಶ್ವಿನಿ ಎಸ್.ಪಿ.**<br>C/O ಎಂ. ಶಿವಕುಮಾರ್ ಬಿ.<br>ನಂ. 61, 4ನೇ ಕ್ರಾಸ್<br>ಟೆಂಪಲ್ ಬೆಲ್ ಲೇಔಟ್,<br>ಶ್ರೀರಾಂಪುರ,<br>ಮೈಸೂರು | SC | ಅರ್ಥಶಾಸ್ತ್ರ ವಿಭಾಗ ಮಹಾರಾಜ ಕಾಲೇಜು ಮೈಸೂರು | ಪ್ರೊ. ಎಸ್.ಟಿ. ರಾಮಚಂದ್ರ<br>ಸಹ ಪ್ರಾಧ್ಯಾಪಕರು<br>ಅರ್ಥಶಾಸ್ತ್ರ ವಿಭಾಗ<br>ಮಹಾರಾಜ ಕಾಲೇಜು, ಮೈಸೂರು | Importance of Animals husbandry in Agriculture |
| 04 | **ಕೃಷ್ಣಪ್ಪ**<br>ಬಿನ್ ಥಾವೆರಪ್ಪ<br>ಮಾರಲದಿನ್ನಿ ತಾಂಡ (ಗ್ರಾಮ)<br>ಜೆಕ್ಕೆರ ಮಾಡು (ಪೋ)<br>ಮಾಸ್ಕಿ (ತಾ) ರಾಯಚೂರು ಜಿಲ್ಲೆ | SC | ರಾಜ್ಯಶಾಸ್ತ್ರ ವಿಭಾಗ ಮಹಾರಾಜ ಕಾಲೇಜು ಮೈಸೂರು | ಪ್ರೊ. ಬಿ.ಎನ್. ಯಶೋಧ<br>ಪ್ರಾಧ್ಯಾಪಕರು<br>ರಾಜ್ಯಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತ ವಿಭಾಗ<br>ಮಹಾರಾಜ ಕಾಲೇಜು, ಮೈಸೂರು | Political Participation of Banjara's with Special Reference to Raichur District |

| | | | | | |
|---|---|---|---|---|---|
| 17 | ನವೀನ್ ಪಿ<br>ಬಿನ್ ಪುಟ್ಟಸ್ವಾಮಿ<br># 7, 3ನೇ ಕ್ರಾಸ್, 4ನೇ ಮೇನ್<br>ವಿನಾಯಕ ನಗರ, ಮೈಸೂರು | SC | ಅಣುಜೀವಶಾಸ್ತ್ರ<br>ಅಧ್ಯಯನ ವಿಭಾಗ<br>ಮಾನಸಗಂಗೋತ್ರಿ<br>ಮೈಸೂರು | ಪ್ರೊ. ಕೆ.ಕೆಂಪರಾಜು<br>ಪ್ರಾಧ್ಯಾಪಕರು,<br>ಅಣುಜೀವಶಾಸ್ತ್ರ<br>ಅಧ್ಯಯನ ವಿಭಾಗ<br>ಮಾನಸಗಂಗೋತ್ರಿ,<br>ಮೈಸೂರು | Under Standing the Toxicity of Bisphenol-AF (BP-AF) on Human Blood cells |
| 18 | ಪ್ರಭುದೇವ ಬಿ.ಬಿ.<br>ಬಿನ್ ಬೆಟ್ಟಯ್ಯ<br>ಆಲಂಬಾಡಿಕಾವಲು (ಗ್ರಾಮ &<br>ಪೋ), ಅಕ್ಕಿಹೆಬ್ಬಾಳು (ಹೋ)<br>ಕೆ.ಆರ್.ಪೇಟೆ (ತಾ), ಮಂಡ್ಯ ಜಿಲ್ಲೆ | SC | ರಸಾಯನಶಾಸ್ತ್ರ<br>ಅಧ್ಯಯನ ವಿಭಾಗ<br>ಮಾನಸಗಂಗೋತ್ರಿ<br>ಮೈಸೂರು | ಪ್ರೊ. ವೈ.ಬಿ. ಬಸವರಾಜು<br>ಪ್ರಾಧ್ಯಾಪಕರು<br>ರಸಾಯನಶಾಸ್ತ್ರ ಅಧ್ಯಯನ<br>ವಿಭಾಗ, ಮಾ.ಗಂ.,<br>ಮೈಸೂರು | Synthetic and study of Biological activity of tetralones and deservatives |
| 19 | ಹಿತೇಶ್ ಎಂ.ಸಿ.<br>ಬಿನ್ ಎಂ.ಎಲ್. ಚಿದಾನಂದ<br>ಕುಮಾರ್<br># 12, 3ನೇ ಬ್ಲಾಕ್, ಎಸ್.ಬಿ.ಎಂ.<br>ಕಾಲೋನಿ, 2ನೇ ಹಂತ,<br>ಶ್ರೀರಾಂಪುರ, ಮೈಸೂರು | SC | ರಸಾಯನಶಾಸ್ತ್ರ<br>ಅಧ್ಯಯನ ವಿಭಾಗ<br>ಮಾನಸಗಂಗೋತ್ರಿ,<br>ಮೈಸೂರು | ಪ್ರೊ. ಕೆ.ಎನ್. ಮೋಹನ<br>ಪ್ರಾಧ್ಯಾಪಕರು<br>ರಸಾಯನಶಾಸ್ತ್ರ<br>ಅಧ್ಯಯನ ವಿಭಾಗ,<br>ಮಾ.ಗಂ., ಮೈಸೂರು | Fabrication of Carbon Based Nano composites for Some Electrochemica l Applications |
| 20 | ಭೈರವ ಆರ್.<br>ಬಿನ್ ರಾಚಪ್ಪ ಡಿ<br>#97, ಹೆಜ್ಜಿಗೆ (ಗ್ರಾಮ)<br>ಕೆ.ಎಸ್.ಹುಂಡಿ(ಪೋ)<br>ನಂಜನಗೂಡು(ತಾ)<br>ಮೈಸೂರು ಜಿಲ್ಲೆ | SC | ಗಣಕ ವಿಜ್ಞಾನ<br>ಅಧ್ಯಯನ ವಿಭಾಗ<br>ಮಾನಸಗಂಗೋತ್ರಿ,<br>ಮೈಸೂರು | ಪ್ರೊ. ಬಿ. ಶಾರದ<br>ಪ್ರಾಧ್ಯಾಪಕರು<br>ಗಣಕ ವಿಜ್ಞಾನ, ಅಧ್ಯಯನ<br>ವಿಭಾಗ<br>ಮಾನಸಗಂಗೋತ್ರಿ,<br>ಮೈಸೂರು | Fake news Detection in Kannada Language using Deep learning Technique |
| 21 | ನಯನ ಎಸ್<br>ಬಿನ್ ಸಿದ್ದರಾಜು<br># 442, ಹೊಸ ಬೀದಿ,<br>ಸಿಂಗಾನಲ್ಲೂರು (ಗ್ರಾಮ)<br>ಕೊಳ್ಳೆಗಾಲ (ತಾ)<br>ಚಾಮರಾಜನಗರ ಜಿಲ್ಲೆ | SC | ಸೂಕ್ಷ್ಮಜೀವಶಾಸ್ತ್ರ<br>ಅಧ್ಯಯನ ವಿಭಾಗ<br>ಮಾನಸಗಂಗೋತ್ರಿ,<br>ಮೈಸೂರು | ಪ್ರೊ. ಎಸ್. ಸತೀಶ್<br>ಪ್ರಾಧ್ಯಾಪಕರು<br>ಸೂಕ್ಷ್ಮಜೀವಶಾಸ್ತ್ರ<br>ಅಧ್ಯಯನ ವಿಭಾಗ<br>ಮಾನಸಗಂಗೋತ್ರಿ,<br>ಮೈಸೂರು | Biosynthesis of Nano particles from Micro BES |
| 22 | ಮೀನಾಕ್ಷಿ ಬಿ.<br>ಬಿನ್ ಬಸವಣ್ಣ ನಾಯ್ಕ ಕೆ.<br>ವರದರಾಜ ದೇವಸ್ಥಾನ ರಸ್ತೆ<br>ಹುಲ್ಲಹಳ್ಳಿ (ಗ್ರಾಮ) ನಂಜನಗೂಡು<br>(ತಾ) ಮೈಸೂರು ಜಿಲ್ಲೆ | ST | ಗ್ರಂಥಾಲಯ ಮತ್ತು<br>ಮಾಹಿತಿ<br>ವಿಜ್ಞಾನ ಅಧ್ಯಯನ<br>ವಿಭಾಗ<br>ಮಾನಸಗಂಗೋತ್ರಿ,<br>ಮೈಸೂರು | ಪ್ರೊ. ಎಂ. ಚಂದ್ರಶೇಖರ<br>ಗ್ರಂಥಾಲಯ ಮತ್ತು<br>ಮಾಹಿತಿ<br>ವಿಜ್ಞಾನ ಅಧ್ಯಯನ<br>ವಿಭಾಗ<br>ಮಾನಸಗಂಗೋತ್ರಿ,<br>ಮೈಸೂರು | Use of Information resources in Universities Libraries in Karnataka: A Study |

| | | | | | |
|---|---|---|---|---|---|
| 34 | **ಶಂಕರ ಹೆಚ್.ಎಸ್. ಬಿನ್ ಲೇಟ್ ಸಿದ್ದಯ್ಯ ಹೊನ್ನೇಗೌಡನಹಳ್ಳಿ (ಗ್ರಾಮ) ದೇವರಹಳ್ಳಿ (ಪೋ), ಗುಂಡ್ಲುಪೇಟೆ (ತಾ) ಚಾಮರಾಜನಗರ ಜಿಲ್ಲೆ** | SC | ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾ.ಗಂ, ಮೈಸೂರು | ಪ್ರೊ. ಎಂ. ನಂಜಯ್ಯ ಹೊಂಗನೂರ್, ಪ್ರಾಧ್ಯಾಪಕರು, ಜಾನಪದ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾ.ಗಂ, ಮೈಸೂರು | ತೇಜಸ್ವಿ ಯವರ ಕೃತಿಗಳಲ್ಲಿ ರೈತ ಮಹಿಳೆ |
| 35 | **ಯೋಗೇಶ್ ಹೆಚ್.ಎಸ್.** ಬಿನ್ ಹೆಚ್.ಸಿ. ಸಿದ್ದರಾಜು ಹಳೇಪುರ (ಗ್ರಾಮ), ಹರವೆ (ಪೋ & ಹೋ) ಚಾಮರಾಜನಗರ ಜಿಲ್ಲೆ | SC | ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು | ಪ್ರೊ. ಕೃಷ್ಣ ಹೊಂಬಾಳ್ ಪ್ರಾಧ್ಯಾಪಕರು ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾ.ಗಂ., ಮೈಸೂರು | Prof. Amartya Sen Contribution to Political Thought |
| 36 | **ಮಹದೇವಸ್ವಾಮಿ ಜೆ. ಬಿನ್ ಜಯಪ್ಪ # 184, ಸೋಸಲೆ (ಗ್ರಾಮ & ಪೋ) ಟಿ.ನರಸೀಪುರ (ತಾ) ಮೈಸೂರು ಜಿಲ್ಲೆ** | SC | ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಭಾಗ ಮೈಸೂರು | ಪ್ರೊ. ಎಸ್.ಮದಿಅಲಗನ್ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಭಾಗ ಮೈಸೂರು | Relationship of Selected Physical Fitness Variables to Skill Performance in Karnataka State Kho-Kho Players (Tentative) |

ಸಂಶೋಧಕರ ಈ ಶಿಷ್ಯವೇತನವು ಏಪ್ರಿಲ್–2024 ರ ಮಾಹೆಯಿಂದ ಪೂರ್ವಾನ್ವಯವಾಗುವಂತೆ ಜಾರಿಗೆ ಬರಲಿದ್ದು ಪಿಹೆಚ್.ಡಿ. ತಾತ್ಕಾಲಿಕ ನೊಂದಣಿಯ ದಿನಾಂಕದಿಂದ ಐದು ವರ್ಷಗಳವರೆಗೆ ಅಥವಾ ಪಿಹೆಚ್.ಡಿ. ಮಹಾಪ್ರಬಂಧವನ್ನು ಸಲ್ಲಿಸುವ ದಿನಾಂಕದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಆ ದಿನಾಂಕದವರೆಗೆ ಮಾತ್ರ ಶಿಷ್ಯವೇತನ ನೀಡುವುದು. ಆಯ್ಕೆಯಾದ ಸಂಶೋಧಕರು ಈ ಕೆಳಗಿನಂತೆ ಶಿಷ್ಯವೇತನ, HRA ಮತ್ತು ಸಾದಿಲ್ವಾರು ವೆಚ್ಚಗಳನ್ನು ಪಡೆಯಲು ಅರ್ಹರಿರುತ್ತಾರೆ.

| ಶಿಷ್ಯವೇತನ | ಶಿಷ್ಯವೇತನದ ಅವಧಿ | SCSP-TSP ಮೊತ್ತ | ಮನೆ ಬಾಡಿಗೆ ಭತ್ಯೆ (16%) | ವಿಶ್ವವಿದ್ಯಾನಿಲಯದ ಮೊತ್ತ | ವಾರ್ಷಿಕ ಸಾದಿಲ್ವಾರು ವೆಚ್ಚ | ಒಟ್ಟು ಮೊತ್ತ |
|---|---|---|---|---|---|---|
| ಕಿರಿಯ ಸಂಶೋಧನಾ ಶಿಷ್ಯವೇತನ (JRF) | 2 ವರ್ಷ | 10,000/- | 3,200/- | 13,200/- | ರೂ. 8,000/- | 23,200/- |
| ಹಿರಿಯ ಸಂಶೋಧನಾ ಶಿಷ್ಯವೇತನ (SRF) | 2 ವರ್ಷಗಳ ನಂತರ | 10,000/- | 3,520/- | 15,520/- | ರೂ. 10,000/- | 25,520/- |

**<u>ಷರತ್ತುಗಳು:</u>**

1. ಸಂಶೋಧಕರು ಈ ಆದೇಶ ತಲುಪಿದ ಒಂದು ವಾರದೊಳಗೆ ವರದಿ ಮಾಡಿಕೊಳ್ಳುವುದು. ಇಲ್ಲದಿದ್ದಲ್ಲಿ ವಿಶ್ವವಿದ್ಯಾನಿಲಯದ ಶಿಷ್ಯವೇತನವನ್ನು ನಿಯಮಾನುಸಾರ ರದ್ದುಪಡಿಸಲಾಗುವುದು.

2. ಸಂಶೋಧನೆಗೆ ವರದಿ ಮಾಡಿಕೊಳ್ಳುವಾಗ ಎಲ್ಲಾ ಮೂಲ ದಾಖಲಾತಿಗಳನ್ನು ಅಂದರೆ ಅಂಕಪಟ್ಟಿ, ವಯಸ್ಸಿನ ಮೂಲ ದಾಖಲಾತಿ, ಜಾತಿ ಪ್ರಮಾಣ ಪತ್ರಗಳನ್ನು ವಿಭಾಗಧ್ಯಕ್ಷರ ಮೂಲಕ ದೃಢೀಕರಿಸಿ ಈ ಕಛೇರಿಗೆ ಸಲ್ಲಿಸುವುದು.
3. ಶಿಷ್ಯವೇತ್ತನದ ಅವಧಿಯು ಐದು ವರ್ಷಗಳಾಗಿರುತ್ತದೆ.
4. ಸಂಶೋಧಕರು ಸಂಶೋಧನಾ ಪ್ರಗತಿಯ ವರದಿಯ ಆಧಾರದ ಮೇಲೆ ಮತ್ತು ಸಂಬಂಧಿಸಿದ ವಿಭಾಗಗಳ ಅಧ್ಯಕ್ಷರ ಹಾಗೂ ಮಾರ್ಗದರ್ಶಕರ ಶಿಫಾರಸ್ಸಿನ ಮೇರೆಗೆ ಸಂಶೋಧನಾ ಶಿಷ್ಯವೇತನವನ್ನು ಮುಂದುವರೆಸಲಾಗುವುದು.
5. ಶಿಷ್ಯವೇತನ ಪಡೆದ ಒಂದು ವರ್ಷದ ಒಳಗಾಗಿ ಪಿಹೆಚ್.ಡಿ.ಗೆ ಖಾಯಂ ನೋಂದಣಿ (Permanent Registration) ಮಾಡಿಸಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ ಶಿಷ್ಯವೇತನ ಹಾಗೂ ಸಾದಿಲ್ವಾರು ವೆಚ್ಚವನ್ನು ಸ್ಥಗಿತಗೊಳಿಸಲಾಗುವುದು.
6. ಶಿಷ್ಯವೇತನಕ್ಕೆ ಆಯ್ಕೆಗೊಂಡ ನಂತರ ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳಲ್ಲಿ ವೇತನ/ಶಿಷ್ಯವೇತನ ಪಡೆಯತಕ್ಕದ್ದಲ್ಲ. ಅಂತಹ ಪ್ರಕರಣಗಳು ಕಂಡುಬಂದಲ್ಲಿ ಯಾವುದೇ ಕಾರಣ ಕೇಳದೆ ಶಿಷ್ಯವೇತನವನ್ನು ರದ್ದುಗೊಳಿಸಲಾಗುವುದು.
7. ಸಂಶೋಧಕರು ತಮ್ಮ ಮಾಸಿಕ **ಶಿಷ್ಯವೇತನದ ಹುಂಡಿಗಳನ್ನು** ಮತ್ತು **ವಾರ್ಷಿಕ ಸಾದಿಲ್ವಾರು ವೆಚ್ಚದ ಹುಂಡಿಯನ್ನು ದ್ವಿಪ್ರತಿಯಲ್ಲಿ** ತಯಾರಿಸಿ, ಹಣಪಾವತಿಗಾಗಿ ಶಿಷ್ಯವೇತನದ ಹುಂಡಿಯ ಮೂಲಕ ಪ್ರತಿ ತಿಂಗಳ ಹಾಜರಾತಿ ಪಟ್ಟಿ ಮತ್ತು ಸಂಶೋಧನಾ ವರದಿಗಳನ್ನು ಮಾರ್ಗದರ್ಶಕರು ಮತ್ತು ವಿಭಾಗಧ್ಯಕ್ಷರ ಶಿಫಾರಸ್ಸಿನೊಂದಿಗೆ **ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ ಕಛೇರಿಗೆ** ಸಲ್ಲಿಸುವುದು.
8. ಸಂಶೋಧಕರು ಆಯಾ ತಿಂಗಳ ಶಿಷ್ಯವೇತನವನ್ನು ಆಯಾ ತಿಂಗಳಲ್ಲೇ ಪಡೆಯಬೇಕು. ಅಂದರೆ ತಿಂಗಳು ಮುಗಿದ 5ನೇ ತಾರೀಖಿನೊಳಗೆ ಹಾಜರಾತಿ ಪಟ್ಟಿಯೊಂದಿಗೆ ಶಿಷ್ಯವೇತನದ ಹುಂಡಿಯನ್ನು ಹಾಗೂ ಪ್ರತಿ ತಿಂಗಳು ಸಂಶೋಧನಾ ವರದಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.
9. ಶಿಷ್ಯವೇತನದ ಹುಂಡಿಯನ್ನು 2, 3 ಮತ್ತು 4 ತಿಂಗಳು ಒಟ್ಟಿಗೆ ಸೇರಿಸಿ ಸಲ್ಲಿಸುವಂತಿಲ್ಲ. ಸಲ್ಲಿಸಿದಲ್ಲಿ ಸೂಕ್ತ ಕಾರಣಗಳೊಂದಿಗೆ ಮಾರ್ಗದರ್ಶಕರು ಹಾಗೂ ವಿಭಾಗಧ್ಯಕ್ಷರ ಶಿಫಾರಸ್ಸಿನೊಂದಿಗೆ ಸಲ್ಲಿಸುವುದು.
10. ಆಯಾ ವರ್ಷದ **ಸಾದಿಲ್ವಾರು ವೆಚ್ಚವನ್ನು** ಆಯಾ ಹಣಕಾಸು ವರ್ಷದೊಳಗೆ ಹುಂಡಿಯನ್ನು ಸಲ್ಲಿಸಿ ಪಡೆಯುವುದು. ಆ ವರ್ಷದೊಳಗೆ ಪಡೆಯದಿದ್ದಲ್ಲಿ ಆ ವರ್ಷದ ಸಾದಿಲ್ವಾರು ವೆಚ್ಚವು ರದ್ದಾಗುತ್ತದೆ.
11. ಎರಡು ವರ್ಷ ಆರು ತಿಂಗಳ ನಂತರ ಕಿರಿಯ ಸಂಶೋಧಕರಿಂದ ಹಿರಿಯ ಸಂಶೋಧಕರಾಗಿ ಬಡ್ತಿ ಪಡೆಯದೇ ಇದ್ದರೆ ಅವರು ಐದು ವರ್ಷದವರೆಗೂ ಕಿರಿಯ ಸಂಶೋಧಕರಾಗಿಯೇ ಮುಂದುವರೆಯಬೇಕಾಗುತ್ತದೆ.
12. ಎರಡು ವರ್ಷ ಆರು ತಿಂಗಳ ನಂತರ ಸಂಶೋಧಕರ ಸಂಶೋಧನಾ ವರದಿಯನ್ನು ಸಂಯೋಜಕರು, ಸಂಶೋಧನಾ ನಿರ್ದೇಶನಾಲಯ, ವಿಷಯಗಳ ಡೀನರು, ವಿಭಾಗಧ್ಯಕ್ಷರು ಮತ್ತು ಮಾರ್ಗದರ್ಶಕರನ್ನೊಳಗೊಂಡ ಸಮಿತಿಯನ್ನು ರಚಿಸಿ ವರದಿ ಬಂದ ನಂತರ ಸಮಿತಿಯ ಶಿಫಾರಸ್ಸಿನಂತೆ ಹಿರಿಯ ಶಿಷ್ಯವೇತನವನ್ನು ಮುಂದುವರಿಸಲಾಗುವುದು.
13. SCSP-TSP ಶಿಷ್ಯವೇತನದ ಮೊತ್ತ ರೂ. 10,000/- ಗಳನ್ನು ಅನುದಾನ ಬರುವ ಮೊದಲೇ ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಸಂಶೋಧಕರ ಖಾತೆಗೆ ಜಮಾ ಮಾಡುವುದರಿಂದ ಸರ್ಕಾರದ SCSP-TSP ವತಿಯಿಂದ Ph.D. ಶಿಷ್ಯವೇತನಕ್ಕಾಗಿ ಬರುವ ಅನುದಾನವನ್ನು ವಿಶ್ವವಿದ್ಯಾನಿಲಯವು ಮರುಭರಿಕೆ ಮಾಡಿಕೊಳ್ಳುತ್ತದೆ.
14. ಶಿಷ್ಯವೇತನದ ಅಂತಿಮ ಹುಂಡಿಯನ್ನು ಸಂಶೋಧನೆ ಮಾಡುತ್ತಿರುವ ವಿಭಾಗ, ಗ್ರಂಥಾಲಯ ಹಾಗೂ ವಿದ್ಯಾರ್ಥಿನಿಲಯಗಳಿಂದ ಬೇಬಾಕಿ (No due Certificate) ಪ್ರಮಾಣ ಪತ್ರಗಳೊಂದಿಗೆ ಉಪಕುಲಸಚಿವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ಕಛೇರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರಿಗೆ ಸಲ್ಲಿಸಿ ಶಿಷ್ಯವೇತನವನ್ನು ಪಡೆಯುವುದು.
15. ಸಂಶೋಧನೆಗೆ ವರದಿ ಮಾಡಿಕೊಳ್ಳಲು ಯಾವುದೇ ರೀತಿಯ ಪ್ರಯಾಣ ಭತ್ಯೆ/ದಿನಭತ್ಯೆಗಳನ್ನು ನೀಡಲಾಗುವುದಿಲ್ಲ. ಸಂಶೋಧನಾ ವಿದ್ಯಾರ್ಥಿಗಳ ಪ್ರಗತಿಯು ಸರಿಯಿಲ್ಲದಿದ್ದಲ್ಲಿ ಮಾರ್ಗದರ್ಶಕರ ಮತ್ತು ಅಧ್ಯಕ್ಷರ ವರದಿಯ ಮೇರೆಗೆ ಯಾವುದೇ ಸಮಯದಲ್ಲಾದರೂ ಶಿಷ್ಯವೇತನವನ್ನು ರದ್ದುಪಡಿಸಲಾಗುವುದು.

16. ಆಯ್ಕೆಯಾಗಿರುವ ಸಂಶೋಧಕರು ಒಂದು ವರ್ಷದ ನಂತರ ಪ್ರತಿ ವರ್ಷವು ಕನಿಷ್ಟ ಒಂದೊಂದು ಸಂಶೋಧನಾ ಲೇಖನವನ್ನು Scopus/Web of Science/UGC- Care List Journals ನಲ್ಲಿ ಕಡ್ಡಾಯವಾಗಿ ಪ್ರಕಟಿಸಬೇಕು ಮತ್ತು ಸದರಿ ಲೇಖನದಲ್ಲಿ ಮಾರ್ಗದರ್ಶಕರ ಹೆಸರಿರಬೇಕು.
17. ವಿಶ್ವವಿದ್ಯಾನಿಲಯದ ನಿಯಮಾನುಸಾರ ಸಂಶೋಧಕರಿಗೆ ವರ್ಷಕ್ಕೆ 15 ದಿವಸಗಳ ಸಾಂದರ್ಭಿಕ ರಜೆ ಹಾಗೂ ವರ್ಷಕ್ಕೆ 15 ದಿವಸಗಳ OODಯನ್ನು ಪಡೆಯಲು ಮಾತ್ರ ಅರ್ಹರಾಗಿರುತ್ತಾರೆ. ಪ್ರತಿ ತಿಂಗಳು ಉಳಿಕೆ ರಜೆಯ ಲೆಕ್ಕಚಾರವನ್ನು ಹಾಜರಾತಿಯಲ್ಲಿ ಭರ್ತಿಮಾಡಿ ಕಳುಹಿಸುವುದು.
18. ಸಂಶೋಧಕರು **ವಿದ್ಯಾರ್ಥಿನಿಲಯದಲ್ಲಿ ವಾಸವಾಗಿದ್ದರೆ** ವಾಸದ ಬಗ್ಗೆ ದೃಢೀಕರಣವನ್ನು ಕಡ್ಡಾಯವಾಗಿ ಶಿಕ್ಷಕಸಲಹೆಗಾರರಿಂದ ಪಡೆದು ನೀಡುವುದು ಮತ್ತು ಪ್ರವೇಶಾತಿ ಪಡೆದ ಮಾಹಿತಿಯನ್ನು ಸಂಶೋಧಕರು ನೀಡದಿದ್ದಲ್ಲಿ ಶಿಸ್ತುಕ್ರಮ ಜರುಗಿಸಲಾಗುವುದು.
19. ಸಂಶೋಧಕರು ಸಂಶೋಧನಾ ಕಾರ್ಯವನ್ನು ಪೂರ್ಣಕಾಲಿಕವಾಗಿ ತೊಡಗಿಸಿಕೊಳ್ಳುವುದು.
20. ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ಆದೇಶದ ಅನುಗುಣವಾಗಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ಪಡೆದಿರುವ ಸಂಶೋಧಕರು ಕಾಲಕಾಲಕ್ಕೆ ನಿಗಧಿಯಾಗುವ ಕೊಠಡಿ ಬಾಡಿಗೆ ಪಾವತಿಸುವುದು.
21. ಸದರಿ ಸಂಶೋಧಕರಿಗೆ ಪ್ರತಿ ಮಾಹೆಯಾನ ನೀಡಲಾಗುವ ರೂ. 23,200/- (ಇಪ್ಪತ್ಮೂರು ಸಾವಿರದ ಇನ್ನೂರು ರೂಪಾಯಿಗಳು ಮಾತ್ರ)ಗಳನ್ನು ವಿಶ್ವವಿದ್ಯಾನಿಲಯದ ಆಂತರೀಕ ಸಂಪನ್ಮೂಲ ಹಾಗೂ ಸರ್ಕಾರ ಶಿಷ್ಯವೇತನಕ್ಕಾಗಿ ಬಿಡುಗಡೆ ಮಾಡುವ ಅನುದಾನದಿಂದ ಭರಿಸಲಾಗುತ್ತದೆ.

ಸದರಿ ಸಂಶೋಧಕರಿಗೆ ನೀಡಲಾಗುವ ಶಿಷ್ಯವೇತನ ಮತ್ತು ವಾರ್ಷಿಕ ಸಾದಿಲ್ವಾರು ವೆಚ್ಚವನ್ನು ಆಯಾಯ ವರ್ಷದ ವಿಶ್ವವಿದ್ಯಾನಿಲಯದ **"ಉತ್ತಮೀಕರಣ ಲೆಕ್ಕಶೀರ್ಷಿಕೆ"**ಯಿಂದ ಭರಿಸಲು ಆದೇಶಿಸಲಾಗಿದೆ.

ಆದೇಶದ ಮೇರೆಗೆ

13/5/2024

ಕುಲಸಚಿವ

**ಇವರಿಗೆ:**

1. ಸಂಬಂಧಪಟ್ಟ ಎಲ್ಲಾ 37 ಸಂಶೋಧನಾ ವಿದ್ಯಾರ್ಥಿಗಳಿಗೆ ಹಾಗೂ ಸಂಬಂಧಿಸಿದ ಮಾರ್ಗದರ್ಶಕರುಗಳಿಗೆ
2. ಅಧ್ಯಕ್ಷರು/ನಿರ್ದೇಶಕರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಮಾನಸಗಂಗೋತ್ರಿ, ಮೈಸೂರು.
3. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಹಾಸನ/ಮಂಡ್ಯ/ಚಾಮರಾಜನಗರ.
4. ಪ್ರಾಂಶುಪಾಲರು, ಮಹಾರಾಜ ಕಾಲೇಜು/ಯುವರಾಜ ಕಾಲೇಜು, ಮೈಸೂರು.
   **ಸಂಶೋಧನಾ ವಿದ್ಯಾರ್ಥಿಯು ವರದಿ ಮಾಡಿಕೊಳ್ಳುವ ಸಮಯದಲ್ಲಿ ಮುಚ್ಚಳಿಕೆ ಪತ್ರ** ಮತ್ತು ವರದಿ ಮಾಡಿಕೊಂಡ ಪ್ರತಿಯೊಡನೆ ಉಪಕುಲಸಚಿವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರಿಗೆ ಹಾಗೂ ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಹಾಗೂ ಸರ್ಕಾರಿ ಲೆಕ್ಕ ಪರಿಶೋಧಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ರವರಿಗೆ ಕಳುಹಿಸುವುದು.
   **ಸೂಚನೆ:**
   **1) ದೃಢೀಕರಣ ಪತ್ರವನ್ನು ಸಂಶೋಧನಾ ವಿದ್ಯಾರ್ಥಿಗಳು ತಮ್ಮ ಸ್ವಂತ ಬರವಣಿಗೆಯಲ್ಲಿ ನೀಡತಕ್ಕದ್ದು**
   **2) ಸಂಶೋಧನಾ ವಿದ್ಯಾರ್ಥಿಗಳು ಸಂಶೋಧನಾ ಕಾರ್ಯದಲ್ಲಿ ಪೂರ್ಣಕಾಲಿಕವಾಗಿ ತೊಡಗಿಸಿಕೊಳ್ಳುವುದು**
5. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು.
7. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
8. **ಶಿಕ್ಷಕ ಸಲಹೆಗಾರರು, ಪಿ.ಜಿ. ಪುರುಷರ ವಿದ್ಯಾರ್ಥಿನಿಲಯ ಬ್ಲಾಕ್**- 2 ಹಾಗೂ ಪಿ.ಜಿ. ಮಹಿಳಾ **ವಿದ್ಯಾರ್ಥಿನಿಲಯ ಬ್ಲಾಕ್**- 1, ಮೈ.ವಿ.ವಿ. **ಸಂಶೋಧನಾ ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯದಲ್ಲಿ ವಾಸವಾಗಿದ್ದಲ್ಲಿ ಮಾಹಿತಿ ನೀಡುವುದು.**
9. ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಮೈಸೂರು ವಿಭಾಗ, ಮೈಸೂರು.
10. ಮಾನ್ಯ ಕುಲಪತಿಯವರ/ಕುಲಸಚಿವರ/ಕುಲಸಚಿವರು (ಪರೀಕ್ಷಾಂಗ) ಆಪ್ತ ಸಹಾಯಕರು, ಮೈಸೂರು ವಿ.ವಿ., ಮೈಸೂರು.
11. ಕಛೇರಿ ಪ್ರತಿ.